ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 5, Mar-Apr 2020, 1-9
©*IIMRD*, Mysuru
IIMRD JOURNALS
www.iimrd.com

# ಬಳ್ಳಾರಿ ಜಿಲ್ಲೆಯ ಶಾಸನಗಳಲ್ಲಿ ಶಾಪಾಶಯ : ಒಂದು ಅಧ್ಯಯನ

**ಡಾ. ಬಿ.ಎಸ್. ಪದ್ಮ* ಮತ್ತು ಡಾ. ವಿ. ನಾಗರಾಜ***

ಪೀಠಿಕೆ

ಪ್ರಾಗಿತಿಹಾಸ ಕಾಲದ ಮಾನವ ಅಲೆಮಾರಿಯಾಗಿದ್ದ. ಆತನ ಎಲ್ಲಾ ಬಗೆಯ ಚಟುವಟಿಕೆಗಳ ಕಾರ್ಯಕ್ಷೇತ್ರವು ಸರೋವರ, ನದಿ, ಕೆರೆ, ತೊರೆಗಳಾಗಿದ್ದವು. ಆರಂಭ ಕಾಲದಲ್ಲಿ ಅಲೆಮಾರಿಯಾಗಿದ್ದ ಮಾನವ ಕ್ರಮೇಣ ಒಂದು ಕಡೆ ನೆಲೆ ನಿಲ್ಲಲು ಪ್ರಾರಂಭಿಸಿದನು. ಅನಂತರ ತನ್ನ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳು ಮುಂದಿನವರಿಗೆ ತಿಳಿಯಬೇಕೆಂದು ಬಯಸಿದ ಹಾಗೂ ಅದನ್ನು ಒಂದು ವ್ಯವಸ್ಥಿತವಾದ ರೂಪದಲ್ಲಿ ಪ್ರಸ್ತುತ ಪಡಿಸಿದ. ಅದುವೇ ಶಿಲಾಶಾಸನವಾಗಿದೆ. ಅದನ್ನು ಹಾಕಿಸಿದ ಬಳಿಕ ಉಳಿಸಿಕೊಳ್ಳುವುದು ತೀರಾ ಕಷ್ಟಕರವೆನಿಸಿದಾಗ ಪರ್ಯಾಯವಾಗಿ 'ಶಾಪಾಶಯ'ವನ್ನು ಬಳಕೆಗೆ ತಂದ. ಪ್ರಾಚೀನ ಕಾಲದಲ್ಲಿ ಧರ್ಮವನ್ನು ಮುಂದೆ ಇಟ್ಟುಕೊಂಡು ಜನರನ್ನು ನಿಯಂತ್ರಿಸುವಂತೆ, ಶಾಸನಗಳನ್ನು ರಕ್ಷಿಸಿಕೊಳ್ಳಲು ಶಾಪಾಶಯಗಳನ್ನು ರಚಿಸುತ್ತಿದ್ದರು.

ಕರ್ನಾಟಕದ ಶಾಸನಗಳನ್ನು ಗಮನಿಸಿದಾಗ ಬಹುಪಾಲು ಶಾಸನಗಳು ದಾನ ಶಾಸನಗಳೇ ಆಗಿವೆ. ರಾಜನು ದಾನವನ್ನು ಕೇವಲ ವೀರರಿಗಷ್ಟೇ ಅಲ್ಲದೆ ಊರಿನ ಕ್ಷೇಮ, ಧಾರ್ಮಿಕ ಕಾರ್ಯ, ವಿದ್ಯಾಕೇಂದ್ರ, ಹಾಗೂ ಸಾಮಾಜಿಕವಾಗಿ ಉಪಯೋಗವಾಗುವಂತಹ ಹಲವಾರು ಅಭಿವೃದ್ಧಿ ಕೆಲಸ ಕಾರ್ಯಗಳಿಗೂ ಸಹ ನೀಡಿರುವುದು ಕಂಡುಬರುತ್ತದೆ. ದೇವಾಲಯಗಳಿಗೆ, ವ್ಯಕ್ತಿಗಳಿಗೆ ಕೊಡುತ್ತಿದ್ದ ದಾನ, ಧರ್ಮದತ್ತಿಗಳನ್ನು ಇತರರು ಅಪಹರಿಸದಿರಲು ಅಥವ ಪರಭಾರೆ ಮಾಡದಿರಲು ಶಾಸನರೂಪದ ಎಚ್ಚರಿಕೆಗಳನ್ನು ಶಾಸನಗಳ ಕೊನೆಯ ಭಾಗದಲ್ಲಿ ಬರೆಸುತ್ತಿದ್ದರು. ಶಾಸನಗಳ ಕೊನೆಯಲ್ಲಿ ಇರುವ ಇಂತಹ ಭಾಗಗಳನ್ನು ಶಾಪಾಶಯ ಎನ್ನುವರು. ಅಲ್ಲದೆ ದಾನ ಶಾಸನಗಳಲ್ಲಿ ದಾನ ಪಡೆದ ವ್ಯಕ್ತಿಗಳು ತಮ್ಮ ದಾನವನ್ನು ವಂಶಪಾರಂಪರ್ಯವಾಗಿ ಉಪಯೋಗಿಸುವ ಉದ್ದೇಶದಿಂದ ಜನಸಾಮಾನ್ಯರಲ್ಲಿ ಭಯ ಹುಟ್ಟಿಸಲು ಶಾಪಾಶಯಗಳನ್ನು ರಚಿಸುತ್ತಿದ್ದರು. ಶಾಸನಗಳ ರಕ್ಷಣೆ ಪುಣ್ಯಕಾರ್ಯವೆಂದೂ ಅದನ್ನು ನಾಶಗೊಳಿಸಿದರೆ ಪಾಪವೆಂತಲೂ ಭಾವಿಸಲಾಗುತ್ತಿತ್ತು. ಶಾಸನಗಳು ಸಮಾಜದ ಆಸ್ತಿಗಳಾಗಿದ್ದು, ಅವುಗಳನ್ನು ರಕ್ಷಿಸಿ ಕಾಪಾಡುವುದು ಸಮಾಜದ ಪ್ರತಿಯೊಬ್ಬನ ಕರ್ತವ್ಯವಾಗಿತ್ತು. ಕ್ರಿಸ್ತಪೂರ್ವದಲ್ಲಿ ರಚನೆಯಾದ ಶಾಸನಗಳ ಅಂತ್ಯದಲ್ಲಿ ಶಾಪಾಶಯ ಶ್ಲೋಕಗಳು ಕಂಡುಬರುವುದಿಲ್ಲ. ಕ್ರಿ.ಶ. ಎರಡನೇ ಶತಮಾನದಿಂದ ಸಂಸ್ಕೃತ ಮತ್ತು ಪ್ರಾಕೃತ ಮಿಶ್ರ ಶಾಸನಗಳು ರಚನೆ ಆರಂಭವಾದ ಮೇಲೆ ಈ ಶಾಪಾಶಯ ಶ್ಲೋಕಗಳು ಆರಂಭವಾಗಿವೆ. ಉದಾಹರಣೆಗೆ: ಕ್ರಿ.ಶ 450ರ ಹಲ್ಮಿಡಿ ಶಾಸನದಲ್ಲಿ 'ಕಳ್ದೋನ್

---

* *ಉಪನ್ಯಾಸಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ.*

ಮಹಾ ಪಾತಕನ್' ಎಂದು ಉಲ್ಲೇಖವಾಗಿದೆ. ಆರಂಭಿಕ ಹಂತದ ಶಾಪಾಶಯಗಳು ಒಂದೊಂದು ವಾಕ್ಯದಲ್ಲಿ ಕಂಡುಬಂದಿವೆ. ಅನಂತರದ ಕಾಲದಲ್ಲಿ ಶಾಪಾಶಯಗಳು ಹೆಚ್ಚು ಬೆಳವಣಿಗೆಯಾಗಿರುವುದನ್ನು ಕಾಣಬಹುದು. ಬಳ್ಳಾರಿ ಜಿಲ್ಲೆಯ ಶಾಸನಗಳನ್ನು ಗಮನಿಸಿದಾಗ ಒಂದೇ ರೀತಿಯ ಶಾಪಾಶಯಗಳು ಕಂಡುಬಂದರೂ ಕೆಲವು ಶಾಸನಗಳಲ್ಲಿ ವಿಶೇಷವಾದ ಶಾಪಾಶಯಗಳಿವೆ. ಇವುಗಳನ್ನು ಎರಡು ರೀತಿಯಲ್ಲಿ ವಿಭಾಗಿಸಬಹುದಾಗಿದ್ದು, ಮೊದನೇಯದು ಸಾಮಾನ್ಯ ಶಾಪಾಶಯ ಎರಡನೇಯದು ವಿಶೇಷ ಶಾಪಾಶಯ

**ಸಾಮಾನ್ಯ ಶಾಪಾಶಯ**

ಕೊಟ್ಟ ದಾನವನ್ನು ಅಪಹರಿಸಿದರೆ, ವಂಚಿಸಿದರೆ, ಅಂತಹವರಿಗೆ ಬ್ರಾಹ್ಮಣರನ್ನು ಮತ್ತು ಗೋವುಗಳನ್ನು ವಾರಣಾಸಿಯಲ್ಲಿ ಹತ್ಯೆ ಮಾಡಿದ ಪಾಪ ಸುತ್ತಿಕೊಳ್ಳುತ್ತದೆ ಎಂಬಿತ್ಯಾದಿ ಹೇಳಿಕೆಗಳು ಸಾವಿರಾರು ಶಾಸನಗಳಲ್ಲಿ ಉಲ್ಲೇಖವಾಗಿವೆ. ಹಾಗೆಯೇ ಪ್ರಾಚೀನ ಶಾಸನಗಳ ಶಾಪಾಶಯದಲ್ಲಿ ಇನ್ನೊಂದು ಎಳೆಯೂ ಇರುತ್ತಿತ್ತು. ಅದೆಂದರೆ ದಾನ ಕೆಡಿಸಿದವರು ಜೈನಮುನಿಗಳನ್ನು ತೊರೆದ, ಬಸದಿಗಳನ್ನು ನಾಶಪಡಿಸಿದ, ಜೈನ ತೀರ್ಥಕ್ಷೇತ್ರಗಳನ್ನು (ಶ್ರವಣ ಬೆಳಗೊಳ) ನಾಶಪಡಿಸಿದ ಪಾತಕನಾಗುತ್ತಾನೆಂಬ ಹೇಳಿಕೆ ಒಂದು ಶಾಸನದಲ್ಲಿದೆ. ಇದು ವಿಷೇಶ ಶಾಪಾಶಯವಾಗಿದೆ.

**ಸ್ವದತ್ತಾಂ ಪರದತ್ತಾಂ ವಾಯೋ ಹರೇತಿ ವಸುನ್ದರಾಂ**
**ಷಷ್ಠಿರ್ವರ್ಷ ಸಹಸ್ರಾಣಿ ವಿಷ್ಠಾಯಂ ಜಾಯತೇ ಕ್ರಿಮಿ**

ಇದು ಸಂಸ್ಕೃತದ ಶ್ಲೋಕವಾಗಿದ್ದು, ತಾವು ನೀಡಿದ ಭೂಮಿಯಾಗಲೀ; ಪರರು ನೀಡಿದ ಭೂಮಿಯನ್ನಾಗಲೀ ಅಪಹರಿಸಿದರೆ ಅರವತ್ತು ವರ್ಷಗಳವರೆಗೆ ಕ್ರಿಮಿಯಾಗಿ ಹುಟ್ಟುತ್ತಾರೆ ಎಂಬ ಅರ್ಥವನ್ನು ನೀಡುತ್ತದೆ.

**ಧರ್ಮ್ಮವನಾವನೋರ್ವ್ವಂ ಪ್ರತಿಪಾಳಿಸಿದಂ**
**ಕುರುಕ್ಷೇತ್ರ ವಾರಣಾಸಿ ಪ್ರಯಾಗೆಯಲು ಸಾಸಿರ**
**ಕವಿತೆಯಂ ಸಹಸ್ರ ಬ್ರಾಹ್ಮರ್ಣ್ಣೆ ದಾನಂಗೆಯ್ದುಫಳಮಕ್ಕು**

ಧರ್ಮವನ್ನು ಪ್ರತಿಪಾಲಿಸಿದವರಿಗೆ ಕುರುಕ್ಷೇತ್ರ, ವಾರಣಾಸಿ, ಪ್ರಯಾಗನಲ್ಲಿ ಸಾವಿರ ಗೋವುಗಳನ್ನು ಸಾವಿರ ಬ್ರಾಹ್ಮಣರಿಗೆ ದಾನ ನೀಡಿದ ಫಲ ದೊರೆಯುತ್ತದೆ ಎಂದಿದೆ.

**ಈ ಧರ್ಮಮನಳಿದಾತ ಶ್ರೀ ವಾರಣಾಸಿಯಲು**
**ಸಹಸ್ರ ಕವಿತೆಯಂ, ಬ್ರಾಹ್ಮಣರು ಮಂಕೊಂದ ಪಾತಕನಕ್ಕು**

ಈ ಧರ್ಮವನ್ನು ಹಾಳು ಮಾಡಿದವವರಿಗ ವಾರಣಾಸಿಯಲ್ಲಿ ಸಾವಿರ ಗೋವುಗಳನ್ನು ಬ್ರಾಹ್ಮಣರನನ್ನು ಕೊಂದ ಪಾಪ ಬರುತ್ತದೆ.

**ಯಿದಕ್ಕಿ ಆರೊಬರು ತಪಿದವರು**
**ತಂಮ ತಂದೆ ತಾಯಿ ವಾರಣಾಸಿಲಿ ಕೊಂದ ಪಾಪಕೆ ಹೋಹರು**

ಈ ಧರ್ಮಕ್ಕೆ ಯಾರು ತಪ್ಪಿ ನಡೆಯುತ್ತಾರೊ ಅವರು ವಾರಣಾಸಿಯಲ್ಲಿ ತಮ್ಮ ತಂದೆ ತಾಯಿಯನ್ನು ಕೊಂದಂತಹ ಪಾಪ ಬರುತ್ತದೆ ಎಂಬುದಾಗಿ ಉಲ್ಲೇಖಿಸಲಾಗಿದೆ. ಈ ಮೇಲಿನ ಎಲ್ಲಾ ಶಾಪಾಶಯಗಳು ಸಾಮಾನ್ಯವಾಗಿ ಬಳ್ಳಾರಿ ಜಿಲ್ಲೆಯ ಎಲ್ಲಾ ಶಾಸನಗಳಲ್ಲಿಯೂ ಕಂಡುಬಂದಿವೆ.

**ವಿಶೇಷ ಶಾಪಾಶಯ**

ಬಳ್ಳಾರಿ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖವಾಗಿರುವ ವಿಶೇಷ ಶಾಪಾಶಯಗಳು ಹೀಗಿವೆ. ಬಲ್ಲಕುಂದೆ ಶಾಸನವೊಂದರಲ್ಲಿ ಸಾವಿರ ಗದ್ಯಾಣ ಪೊನ್ನುವ...ಮಹಾಪಾತಕ ಎಂದಿದೆ [1]. ಈ ಶಾಪಾಶಯದಲ್ಲಿ ನಾಣ್ಯಗಳ ಬಗ್ಗೆ ಉಲ್ಲೇಖವಾಗಿರುವುದು ವಿಶೇಷತೆಯನ್ನು ಸೂಚಿಸುತ್ತದೆ. ಕ್ರಿ.ಶ.1036ರ ಒರುವಾಯಿ ಶಾಸನದಲ್ಲಿ ವಿಷಂ ತ್ಯಾಹು। ಬ್ರಹ್ಮಸ್ವಂ ವಿಷ ಮುಚ್ಚತೇ ವಿಷ ಮೇಕಾತಿನಂ ಹರಿತಿ ಪೌತಿಕಂ[2] ಇದು ಸಂಸ್ಕೃತದ ಶ್ಲೋಕವಾಗಿದ್ದು, ವಿಷಯವೆಂಬುದು ವಿಷವಲ್ಲ ಬ್ರಹ್ಮಸ್ವದ ಸ್ವತೇ ನಿಜವಾದ ವಿಷ. ವಿಷ ವಿಷಯವು ಒಬ್ಬನನ್ನು ಕೊಲ್ಲುತ್ತದೆ ಆದರ ಬ್ರಹ್ಮಸ್ವವು ಮಕ್ಕಳು ಮೊಮ್ಮಕ್ಕಳನ್ನು ಕೊಲ್ಲುತ್ತದೆ ಎಂಬರ್ಥವನ್ನು ಕೊಡುತ್ತದೆ. ಗುಂಗನೂರು ಶಾಸನದಲ್ಲಿ ವಾರ್ಗ್ದತಂ ಮನೋದತಂ ಧಾರತಂ ನದೀಯ ಷಷ್ಟಿವರುಷ ಸಹಪ್ರಾಣಿ ವಿಷ್ಟಾಯತೆಕ್ರಿಮಿ [3] ಎಂದು ಉಲ್ಲೇಖಿಸಲಾಗಿದೆ. ಅಂದರೆ ಮಾತಿನಲ್ಲಾಗಲೀ ಮನಸ್ಸಿನಾಗಲೀ ಧಾರೆಎರೆಯುವುದರ ಮೂಲಕವಾಗಿಯಾಗಲೀ ನೀಡಿದ ದಾನವನ್ನು ಬೇರೆಯವರಿಗೆ ನೀಡಬಾರದು ಹಾಗೆ ಮಾಡಿದಲ್ಲಿ ಅರವತ್ತು ಸಾವಿರ ವರ್ಷಗಳವರೆಗೆ ಹುಳುವಾಗಿ ಹುಟ್ಟುತ್ತಾನೆ ಎಂಬ ಅಂಶವಿದೆ. ಈ ಶಾಸನದಲ್ಲಿ ದಾನ ಪಡೆದ ವ್ಯಕ್ತಿಯು ಶಾಸನವನ್ನು ಹಾಳು ಮಾಡಬಾರದು ಅಥವಾ ಅಪಹರಿಸಬಾರದು ಎಂಬ ಆಶಯವನ್ನು ತಿಳಿಸುತ್ತದೆ.

ಕ್ರಿ.ಶ.1054ರ ಹಿರೇಮ್ಯಾಗಳ ಮೇರಿ ಶಾಸನದಲ್ಲಿ 'ಧರ್ಮವನ್ನು ಪ್ರತಿಪಾಸಿದಂ ಬಿಟ್ಟಕ್ಷಯದಾನ ಮುಮಶ್ವದ ಮುರಿಗೆಯ್ದ ಫಳಮಕ್ಕುಂ'.[4] ಅಂದರೆ ಈ ಧರ್ಮವನ್ನು ಪಾಲಿಸಿದವರಿಗೆ ವಾರಣಾಸಿಯಲ್ಲಿ ಗೋವುಗಳನ್ನು ಅನಂತವಾಗಿ ದಾನ ನೀಡುತ್ತಲೇ ಇರುವ ಫಲ ದೊರೆಯುವುದು ಎಂಬ ಅರ್ಥವಿದೆ. ಕ್ರಿ.ಶ.1098ರ ಕುಡುತಿನಿ ಶಾಸನದಲ್ಲಿ 'ಯಾವನೂರ್ವ್ವಂ ದಾಳವಿಟ್ಟತನಂಗೆಯ್ದನಪ್ಪಡೆ ಪಂದಿಸುತ್ತುದು, ನಾಯಿಸತ್ತುದು, ಸ್ವಾನ ಗಾರ್ಧ್ಪ ಚಾಂಡಾಳರು ಜಾತಿಗುಂ ವೃತ್ತಿಗಂ ಬಹಿ'.[5] ಅಂದರೆ ಶಾಸನವನ್ನು ಹಾಳು ಮಾಡಿದವರು ಸತ್ತರೆ ಹಂದಿ, ನಾಯಿ, ಕತ್ತೆ ಮತ್ತು ಚಾಂಡಾಳರು ಸತ್ತಂತೆ ಅಥವಾ ಇವರಂತೆ ಸಾಯಲಿ, ಜಾತಿ ಮತ್ತು ವೃತ್ತಿಗೆ ದ್ರೋಹ ಬಗೆದವನು ಎಂಬ ಅರ್ಥವಿದೆ.

ಕ್ರಿ.ಶ.1226ರ ಉತ್ತಂಗಿ ಶಾಸನದಲ್ಲಿ 'ಯೀ ಧರ್ಮವನು ಪ್ರತಿಪಾಳಿಸಿದಾತನು ಯಿಂದ್ರ ಚಂದ್ರ ಪದವಿಯಂ ಪಡೆದವರು' ಎಂದು ಉಲ್ಲೇಖಿಸಲಾಗಿದೆ. [6] ಇಂದ್ರ ಮತ್ತು ಚಂದ್ರನ ಸ್ಥಾನವು

---

[1] ಸಿರಗುಪ್ಪ ತಾಲೂಕು ಶಾ.ಸಂ.30 ಪು.ಸಂ.110

[2] ಬಳ್ಳಾರಿ ತಾಲೂಕು, ಶಾ.ಸಂ.43, ಪು.ಸಂ.58: ಸಿರಗುಪ್ಪ ತಾಲೂಕು, ಶಾ.ಸಂ.18, ಪು.ಸಂ.104.

[3] ಸಿರಗುಪ್ಪ ತಾಲೂಕು, ಶಾ.ಸಂ.47, ಪು.ಸಂ.123.

[4] ಹರಪನಹಳ್ಳಿ ತಾಲೂಕು, ಶಾ.ಸಂ.31, ಪು. ಸಂ.487.

[5] ಕುಡುತಿನಿ ತಾಲೂಕು, ಶಾ.ಸಂ.20, ಪು.ಸಂ.29.

[6] ಹಡಗಲಿ, ತಾಲೂಕು, ಶಾ.ಸಂ.108, ಪು.ಸಂ.449.

ಗೌರವಯುತವಾದುದರಿಂದ ಇವರ ಹೆಸರಿನ ಪದವಿಯನ್ನು ಪಡೆಯುವುದು ಮಹತ್ವದಾಗಿದೆ. ಆದ್ದರಿಂದ ಧರ್ಮವನ್ನು ಪಾಲಿಸಿದವರು ಇಂದ್ರ ಮತ್ತು ಚಂದ್ರನ ಪದವಿಯನ್ನು ಪಡೆದಂತೆ ಎಂಬುದಾಗಿದೆ.

ಕ್ರಿ.ಶ.1472ರ ಹಂಪಿಯ ಶಾಸನದಲ್ಲಿ ತಂದೆ ತಾಯಿಯನ್ನು ಮಖಾತೀರ್ಥದಲ್ಲಿ ಕೊಂದ ಪಾಪದಲಿ ಹೋಗುವರು. ಅವರಿಗೆ ಕಲಾಬಿನಾಣೆಯಿದು ತಪ್ಪಿದರೆ ಅವನ ಹೆಂಡತಿಯ ಮೇಲೆ ಕತೆಯೇ ಯಿವುದು ನಾಯಿ ಜಲ್ಮವನು ಹಂದಿ ಬಸುಂಬಹನು ಹಂದಿ ತಿಂದ ಪಾಪಕೆ ಹೋಹರು.[7] ಈ ಶಾಸನದಲ್ಲಿ ಹಂದಿಯ ಉಲ್ಲೇಖವಿದೆ. ಹಂದಿಯನ್ನು ತಿನ್ನಬರೆದೆನ್ನುವ ನೀತಿ ಹೆಚ್ಚಾಗಿ ಮುಸಲ್ಮಾನರಿಗೆ ಅನ್ವಯಿಸುವುದರಿಂದ ಈ ಶಾಸನವು ಮುಸಲ್ಮಾರನ್ನು ಕುರಿತದ್ದಾಗಿರಬಹುದು.

ಕ್ರಿ.ಶ.1529ರ ಹಾವಿನಹಾಳು ವೀರಾಪುರ ಶಾಸನದಲ್ಲಿ 'ಯಿದ ತಪ್ಪಿದರೆ ಯೀಊರ ಮಾದರ ಮಕ್ಕಳು' ಎಂದಿದೆ.[8] ಈ ಶಾಸನದಲ್ಲಿ ಜಾತಿಯ ಉಲ್ಲೇಖವಿರುವುದನ್ನು ಗಮನಿಸಬಹುದು. ಕ್ರಿ.ಶ.1531ರ ಹೊಸಪೇಟೆ ಶಾಸನದಲ್ಲಿ 'ಇದಕ್ಕ ತಪ್ಪಿದ್ದವರು ತಮ್ಮ ಹಿರಿಯ ಮಗನ ತಲೆಯ ಬುರುಡೆಯೊಳಗೆ ಮದ್ಯಪಾನ ಹೊಯ್ಕೊಂಡು ಅನುಭವಿಸಿದರು.[9] ಈ ಧರ್ಮಕ್ಕೆ ತಪ್ಪಿದವರು ತಮ್ಮ ಹಿರಿಯ ಮಗನಿಗೆ ಮದ್ಯಪಾನವನ್ನು ಕುಡಿಸಿದಂತೆ ಎಂಬರ್ಥವಿದೆ.

ಕ್ರಿ.ಶ.1562ರ ನಕ್ಕರಹಾಳು ಶಾಸನದಲ್ಲಿ 'ಆರು ತಪಿಪದರೆ ಕತೆ ತುಣಿ ತಿಂದು ಕಳ ಕುಡಿದು ಗೋವ ಕೊಂದ ಪಾತಕತೆ ಹೋಹರು' ಎಂದಿದೆ.[10] ಈ ಶಾಸನದಲ್ಲಿ ಕತ್ತೆಯೊಂದಿಗೆ ಅಶ್ಲೀಲ ಪದಗಳನ್ನು ಬಳಸಿರುವುದು ಕಂಡುಬಂದಿದೆ. ಕ್ರಿ.ಶ.1691ರ ಕಂಪ್ಲಿಯ ಶಾಸನವೊಂದರಲ್ಲಿ 'ಈ ತಪ್ಪಿದವರು ಅರಮನೆ ಗುರುಮನೆಗೆ ಅಪರಾಧ ಕೊಡಬೇಕು'.[11] ಈ ಧರ್ಮಕ್ಕೆ ತಪ್ಪಿದವರು ಅರಮನೆ ಮತ್ತು ಗುರು ಮನೆಗೆ ಅಪರಾಧ ಮಾಡಿದಂತೆ. ಹಾಗೆಯೇ ಕ್ರಿ.ಶ.1759ರ ತೆಕ್ಕಲಕೋಟೆ ಶಾಸನವೊಂದರಲ್ಲಿ 'ಧರ್ಮಕ್ಕೆ ತಪ್ಪಿದ ಮುಸಲಮಾನರು ಮಡಿದರೆ ಕುರನಕ್ಕೆ ತಪ್ಪಿದವರು'.[12] ಕುರಾನ್ ಮುಸಲ್ಮಾನರ ಪವಿತ್ರ ಗ್ರಂಥವಾಗಿದ್ದು, ಧರ್ಮಕ್ಕೆ ತಪ್ಪಿದ ಮುಸಲ್ಮಾನರು ಮಡಿದರೆ ಅವರು ಕುರಾನ ಗ್ರಂಥಕ್ಕೆ ತಪ್ಪಿನಡೆದಂತೆ ಎಂದು ಅರ್ಥೈಸಲಾಗಿದೆ.

ಶಾಪಾಶಯಗಳಲ್ಲಿ ದಾನಶಾಸನಗಳನ್ನು ಅಪಹರಿಸಿದರೆ ತೀರ್ಥಕ್ಷೇತ್ರಗಳಲ್ಲಿ ತಂದೆ, ತಾಯಿ, ಬ್ರಾಹ್ಮಣ ಮತ್ತು ಗೋವುಗಳನ್ನು ಕೊಂದ ಪಾಪ ಬರುತ್ತದೆ ಎಂಬುದು ಬಳ್ಳಾರಿ ಜಿಲ್ಲೆಯ ಬಹಳಷ್ಟು ಶಾಸನಗಳಲ್ಲಿ ಉಲ್ಲೇಖವಿದ. ಇದರೊಂದಿಗೆ ವ್ಯಕ್ತಿ ಸಂಬಂದಿತ, ಪ್ರಾಣಿ ಸಂಬಂಧಿತ ಮತ್ತು ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಶಾಪಾಶಯಗಳೂ ಕೂಡ ಕಂಡು ಬಂದಿವೆ.

[7] ಹಂಪಿ ಶಾ.ಸಂ.315 ಮತ್ತು 316 ಪು.ಸಂ.227–228

[8] ಬಳ್ಳಾರಿ ತಾಲೂಕು, ಶಾ.ಸಂ.46, ಪು.ಸಂ.62.

[9] ಹೊಸಪೇಟೆ ತಾಲೂಕು ಶಾ.ಸಂ. 12. ಪು.ಸಂ.149.

[10] ಹಡಗಲಿ ತಾಲೂಕು, ಶಾ.ಸಂ.111, ಪು.ಸಂ.451, ಹೊಸಪೇಟೆ ತಾಲೂಕು, ಇಂಗಳಗಿ, ಶಾ.ಸಂ.35, ಪು.ಸಂ.172.

[11] ಹೊಸಪೇಟೆ ತಾಲೂಕು ಶಾ.ಸಂ. 43 ಪು.ಸಂ.179.

[12] ಸಿರಗುಪ್ಪ ತಾಲೂಕು, ಶಾ.ಸಂ.57, ಪು.ಸಂ.131

ಕ್ರಿ.ಶ.1534ರ ಹಂಪಿ ಶಾಸನದಲ್ಲಿ 'ಈ ಧರ್ಮಕ್ಕೆ ತಪ್ಪಿದವರು ತಮ್ಮ ತಂದೆ, ತಾಯಿ, ಬ್ರಾಹ್ಮಣ ಮತ್ತು ಗೋವುಗಳನ್ನು ವಾರಣಾಸಿಯಲ್ಲಿ ಕೊಂದಪಾಪ ಬರುತ್ತದೆ'.[13] ಕ್ರಿ.ಶ.1530ರ ಉಚ್ಚಂಗಿದುರ್ಗ ಶಾಸನದಲ್ಲಿ 'ತಮ್ಮ ತಾಯಿಯ ಮಾತಿಗೆ ತಪ್ಪಿದವರು' ಎಂಬುದಾಗಿದೆ.[14] ಕ್ರಿ.ಶ.1542ರ ನಲ್ಲಾಪುರದ ಶಾಸನದಲ್ಲಿ ಗುರು ಗೋ ಬ್ರಾಹ್ಮಣರನ್ನು ವಾರಣಾಸಿಯಲ್ಲಿ ಕೊಂದ ಪಾಪ ಬರುವುದಾಗಿ ತಿಳಿಸಲಾಗಿದೆ.[15] ಕ್ರಿ.ಶ 1691ರ ಕಂಪ್ಲಿಯ ಶಾಸನದಲ್ಲಿ ಅರಮನೆಗೆ ಮತ್ತು ಗುರುಮನೆಗೆ ಅಪರಾಧ ಮಾಡಿದುದರ ಉಲ್ಲೆಖವಿದೆ.[16] ಕ್ರಿ.ಶ 1531ರ ಹೊಸಪೇಟೆ ತಾಲೂಕಿನ ಶಾಸನದಲ್ಲಿ ಹಿರಿಯ ಮಗನ ಕುರಿತು ಹೇಳಲಾಗಿದೆ.[17] ಕ್ರಿ.ಶ 1052ರ ಬೆರಸ್ತಹಳ್ಳಿಯ ಶಾಸನವೊಂದರಲ್ಲಿ ತಾಯಿಯ ತಂಗಿಯ ಉಲ್ಲೆಖವಿದೆ.[18] ಕ್ರಿ.ಶ 1529ರ ಹಾವಿನಹಾಳು ವೀರಾಪುರ ಶಾಸನದಲ್ಲಿ ಮಾದನ ಮಕ್ಕಳು ಎಂದಿದೆ.[19] ಅದೆ ರೀತಿ ಕ್ರಿ.ಶ.1548ರ ಮೈದೂರು ಶಾಸನದಲ್ಲಿ ಅನ್ಯಜಾತಿಯ ಮಕ್ಕಳೆಂದು ಉಲ್ಲೇಖವಾಗಿದೆ. ಕ್ರಿ.ಶ.1510ರ ಯಲ್ಪಿ ಶಾಸನದಲ್ಲಿ ತನ್ನ ಹೆಂಡತಿಯನ್ನು ಬೇರೆಯವರಿಗೆ ಮದುವೆ ಮಾಡಿ ಕೊಟ್ಟಿದುದರ ಬಗ್ಗೆ ತಿಳಿಸುತ್ತದೆ.[20]

ಈ ಮೇಲಿನ ಶಾಪಾಶಯಗಳು ವ್ಯಕ್ತಿ ಸಂಬಂಧಿತ ಶಾಪಾಶಯಗಳಾಗಿವೆ. ಈ ಶಾಪಾಶಯಗಳ ಜೊತೆಗೆ ಪ್ರಾಣಿಗಳ ಉಲ್ಲೇಖವಿರುವುದನ್ನು ನೋಡಬಹುದು. ಬಹುತೇಕ ಶಾಸನಗಳಲ್ಲಿ ಸಾವಿರ ಕವಿಲೆಯುಮಂ ಕೊಂದ ಮಹಾಪಾತಕ್ಕೆ ಹೋಗುವರು ಎಂಬುದಾಗಿದೆ.

ಕ್ರಿ.ಶ.1098ರ ಕುಡತಿನಿ ಶಾಸನದಲ್ಲಿ ಹಂದಿ, ನಾಯಿ, ಕತ್ತೆಯ ಪ್ರಸ್ತಾಪವಿದೆ.[21] ಕ್ರಿ.ಶ.1548ರ ಕೊಟ್ಟೂರು ಶಾಸನದಲ್ಲಿ 'ನಾಯಿಯಿಂದ ಮಕ್ಕಳು' ಎಂದು ಉಲ್ಲೇಖಿಸಲಾಗಿದೆ.[22] ಕ್ರಿ.ಶ.1562ರ ನಕ್ಕರಹಾಳು ಶಾಸನದಲ್ಲಿ 'ಆರು ತಪ್ಪಿದರೆ ಕತ್ತೆ ತುಣೆ ತಿಂದು ಕಳ ಕುಡಿದು' ಎಂದಿದೆ.[23] ಕ್ರಿ..1551ರ ಅಂತಾಪುರ ಶಾಸನದಲ್ಲಿ 'ಯಿದ ಆಳುಪಿದವನ ಬಾಯಲಿ ಕತೆ ತುಣಿ ಕಳ್ಳುಪ್ಪು'.[24] ಹೀಗೆ ಶಾಪಾಶಯಗಳಲ್ಲಿ ಗೋವು ಪವಿತ್ರ ಪ್ರಾಣಿಯಾಗಿ ಕಂಡುಬಂದಿದೆ. ಕತ್ತೆ, ನಾಯಿ ಮತ್ತು ಹಂದಿಯನ್ನು ನಿಷ್ಕೃಷ್ಟವಾಗಿ ಬಳಸಲಾಗಿದೆ. ಅದರಲ್ಲಿಯೂ ಕತ್ತೆಯ ಜನ್ಮ ಹೀನವೆಂಬರ್ಥದಲ್ಲಿ ಅಶ್ಲೀಲ ಪದಗಳನ್ನು ಉಪಯೋಗಿಸಿ ಚರ್ಚಿಸಲಾಗಿದೆ.

ಕೆಲವು ಸಂದರ್ಭದಲ್ಲಿ ಶಾಸನಗಳನ್ನು ಹಾಳು ಮಾಡದಂತೆ ಇರಲಿ ಎಂದು ದೇವರುಗಳ ಮೇಲೆ ಆಣೆ ಇರಸಿ ಶಾಪಾಶಯಗಳನ್ನು ಹಾಕಿಸುತ್ತಿದ್ದರು. ಇಲ್ಲಿ ದೈವತ್ವದ ಪರಿಕಲ್ಪನೆಯನ್ನು ಗಮನಿಸಬಹುದು.

[13] ಹಂಪಿ ಶಾಸನ, ಶಾ, ಸಂ.132, 181 ಮತ್ತು 182, ಪು.ಸಂ.107, 132 ಮತ್ತು 134.

[14] ಹರಪ್ಪನಹಳ್ಳಿ ತಾಲೂಕು, ಶಾ.ಸಂ.22, ಪು. ಸಂ.470: ಹೊಸಪೇಟೆ ತಾಲೂಕು, ಹೊಸೂರು, ಶಾ.ಸಂ.18, ಪು. ಸಂ.152: ಸಿರಗುಪ್ಪ ತಾಲೂಕು ಶಾ.ಸಂ.20, ಪು.ಸಂ.154

[15] ಹಂಪಿ ಶಾ.ಸಂ. 394, ಪು.ಸಂ.276.

[16] ಹೊಸಪೇಟೆ ತಾಲೂಕು ಶಾ.ಸಂ.43, ಪು.ಸಂ.179.

[17] ಹೊಸಪೇಟೆ ತಾಲೂಕು ಶಾ.ಸಂ 1, ಪು.ಸಂ.138.

[18] ಹರಪ್ಪನಹಳ್ಳಿ ತಾಲೂಕು ಶಾ.ಸಂ 52, ಪು.ಸಂ.510.

[19] ಬಳ್ಳಾರಿ ತಾಲೂಕು ಶಾ.ಸಂ.46, ಪು.ಸಂ.62.

[20] ಬಳ್ಳಾರಿ ತಾಲೂಕು ಶಾ.ಸಂ.66, ಪು.ಸಂ.83.

[21] ಬಳ್ಳಾರಿ ತಾಲೂಕು, ಶಾ.ಸಂ.8, ಪು.ಸಂ.29.

[22] ಕೂಡ್ಲಗಿ ತಾಲೂಕು ಶಾ.ಸಂ.11, ಪು.ಸಂ.232.

[23] ಹಡಗಲಿ ತಾಲೂಕು ಶಾ.ಸಂ.111, ಪು.ಸಂ.451.

[24] ಹೊಸಪೇಟೆ ತಾಲೂಕು. ಶಾ.ಸಂ.22, ಪು.ಸಂ.156.

ಕ್ರಿ.ಶ.1154ರ ಹಳ್ಯ ಶಾಸನದಲ್ಲಿ ಮಲ್ಲಿಕಾರ್ಜುನನ ಉಲ್ಲೇಖವಿದೆ.[25] ಕ್ರಿ.ಶ1534ರ ಶಾಸನವೊಂದರಲ್ಲಿ ವಿಠಲದೇವರ ಉಲ್ಲೇಖವಿದೆ.[26]

ಧಾರ್ಮಿಕ ವಿಷಯಗಳು ಕೂಡ ಶಾಸನಗಳಲ್ಲಿ ಕಂಡುಬಂದಿದೆ. ಈ ಧರ್ಮಗಳಿಗೆ ಸಂಬಂಧಿಸಿದಂತೆ ಪುಣ್ಯಕ್ಷೇತ್ರಗಳನ್ನು ಹೆಚ್ಚಾಗಿ ಶಾಸನಗಳಲ್ಲಿ ಬಳಸತೊಡಗಿದರು. ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ಕ್ರಿ.ಶ.1111ರ ಹನಶಿ ಶಾಸನದಲ್ಲಿ ಕುರುಕ್ಷೇತ್ರ, ಪ್ರಯಾಗ ಪುಣ್ಯ ಕ್ಷೇತ್ರಗಳ ಉಲ್ಲೇಖಗಳಿವೆ.[27] ಶಾಸನಗಳಲ್ಲಿ ಶಿವದ್ರೋಹ, ಶಿವಾಚಾರ ದ್ರೋಹಿಗಳ ಮತ್ತು ಶೈವ ಪುಣ್ಯಕ್ಷೇತ್ರಗಳ ಹೆಸರುಗಳಿವೆ. ಇವು ಶೈವಧರ್ಮವನ್ನು ಪ್ರತಿಬಿಂಬಿಸುತ್ತವೆ. ಕ್ರಿ.ಶ.1142ರ ಹೊಳಲು ಶಾಸನದಲ್ಲಿ 'ಧರ್ಮಮಂ ಪ್ರತಿಪಾಳಿಸುವವರು ಆಯ್ಯಾನ್ವರು' ಎಂದಿದೆ.[28] ಕ್ರಿ.ಶ.1021ರ ಹಿರೇಮ್ಯಾಗಳ ಮೇರಿ ಶಾಸನದಲ್ಲಿ 'ಸಾವಿರ ಲಿಂಗಮಂ ತಪ್ಪಸ್ವಿಯು ಮನಳದ ಪಾತಕ ಮಕ್ಕು ಎಂದಿದೆ'.[29] ಹಿಂದೂಗಳಿಗೆ ಕಾಶಿ ಅಥವಾ ವಾರಣಾಸಿ ಪುಣ್ಯಕ್ಷೇತ್ರವಾದರೆ ಮುಸಲ್ಮಾನರಿಗೆ ಮೆಕ್ಕಾ ಪವಿತ್ರ ಸ್ಥಳ ಹಾಗೆಯೇ ಕುರಾನ್ ಪವಿತ್ರ ಗ್ರಂಥವಾಗಿದೆ. ಹಿಂದೂಗಳಿಗೆ ಗೋವು ಪವಿತ್ರವಾದ ಪ್ರಾಣಿ, ಮುಸಲ್ಮಾನರಿಗೆ ಹಂದಿ ಅಪವಿತ್ರ ಪ್ರಾಣಿಯಾಗಿದೆ. ಕ್ರಿ.ಶ.1472ರ ಹಂಪಿಯ ಶಾಸನದಲ್ಲಿ ಹಂದಿಯ ಬಗ್ಗೆ ತಿಳಿಸಲಾಗಿದೆ.[30] ಅದೇ ರೀತಿ ಕ್ರಿ.ಶ.1759ರ ತೆಕ್ಕಲಕೋಟೆ ಶಾಸನದಲ್ಲಿ ಕುರಾನ್ ಗ್ರಂಥದ ಉಲ್ಲೇಖವಿದೆ.[31] ಇವು ಮುಸ್ಲಿಂ ಧರ್ಮಕ್ಕೆ ಸಂಬಂಧಿಸಿದ ಶಾಪಾಶಯಗಳಾಗಿವೆ.

**ಇತರ ವಿವರಗಳು**

ಶಾಪಾಶಯಗಳು ಕಾಲ, ನದಿ, ಯಾಗ, ಪದವಿ, ನಾಣ್ಯ, ಸ್ವರ್ಗ–ನರಕ ಪಂಚಮಹಾಪಾತಕ, ರೋಗ, ಸಂಖ್ಯಾಸೂಚಕ ಮತ್ತು ಅಲಂಕಾರಗಳನ್ನು ಕುರಿತದ್ದಾಗಿವೆ. ದಾನವನ್ನು ನೀಡುವಾಗ ಕೆಲವು ವಿಶೇಷ ಸಂದರ್ಭದಲ್ಲಿ ನೀಡಿರುವುದನ್ನು ಗುರುತಿಸಬಹುದು.

ಕ್ರಿ.ಶ.1110ರ ಹೂವಿನ ಹಡಗಲಿ ಶಾಸನದಲ್ಲಿ 'ಸೂರ್ಯಗ್ರಹಣದೊಳ್ ಭಯಮುಖಿಗೊಟ್ಟ ಫಲ ಮುಕ್ತ' ಎಂದಿದೆ.[32] ಹಿರೇ ಹಡಗಲಿ ಶಾಸನದಲ್ಲಿ ಸೂರ್ಯಗ್ರಹಣ, ಸೋಮಗ್ರಹಣ ಮತ್ತು ಸಂಕ್ರಮಣಗಳ ಉಲ್ಲೇಖವಿದೆ.[33] ಪಾವಿತ್ರತೆಯ ಸ್ಥಾನವನ್ನು ಪಡೆದಿರುವ ನದಿಗಳ ಉಲ್ಲೇಖ ಶಾಪಾಶಯಗಳಲ್ಲಿ ಕಂಡುಬಂದಿದೆ. ಕ್ರಿ.ಶ.1183ರ ಮಾನ್ಯರ ಮಸಲವಾಡ ಶಾಸನದಲ್ಲಿ ಗಂಗೆ, ಯಮುನಾ ನದಿಗಳ ಉಲ್ಲೇಖವಿದೆ.[34] ಹಾಗೆಯೇ ಕ್ರಿ.ಶ.1130ರ ಸಿಂದವಾಳ ಶಾಸನದಲ್ಲಿ ಗಂಗೆಯ ಪ್ರಸ್ತಾಪವಿದೆ.[35] ದಾನ

---

[25] ಕೂಡ್ಲಿಗಿ ತಾಲೂಕು, ಶಾ.ಸಂ.3, ಪು.ಸಂ.225.
[26] ಹಂಪಿ ಶಾಸನ, ಶಾ.ಸಂ.193, 185, 189, 191 ಪು. ಸಂ.149,140,144,146.
[27] ಹಗರಿಬೊಮ್ಮನಹಳ್ಳಿ ತಾಲೂಕು ಶಾ.ಸಂ.1, ಪು.ಸಂ.246; ಬಲ್ಲಕುಂದೆ ಶಾ.ಸಂ.30, ಪು.ಸಂ.110.
[28] ಹಡಗಲಿ ತಾಲೂಕು ಶಾ.ಸಂ.36, ಪು.ಸಂ.341; ರಂಗಾಪುರ ಶಾ.ಸಂ.77, ಪು.ಸಂ.401; ಹಂಪಿ ಶಾಸನ ಕ್ರಿ.ಶ.1529, ಶಾ.ಸಂ.27, ಪು.ಸಂ.13.
[29] ಹರಪನಹಳ್ಳಿ ತಾಲೂಕು ಶಾ.ಸಂ.31, ಪು.ಸಂ.487; ಚಟ್ನಹಳ್ಳಿ ಶಾ.ಸಂ.1. ಪು.ಸಂ.455; ಉಚ್ಚಂಗಿದುರ್ಗ ಶಾ.ಸಂ.21, ಪು.ಸಂ.458.
[30] ಹಂಪಿ ಶಾಸನ, ಶಾ.ಸಂ.315, ಪು.ಸಂ.227; ಶಾ.ಸಂ.316, ಪು.ಸಂ.228.
[31] ಸಿರಗುಪ್ಪ ತಾಲೂಕು ಶಾ.ಸಂ.57, ಪು.ಸಂ.131.
[32] ಹಡಗಲಿ ತಾಲೂಕು ಶಾ.ಸಂ.85, ಪು.ಸಂ.418.
[33] ಹಡಗಲಿ ತಾಲೂಕು, ಶಾ.ಸಂ.54, ಪು.ಸಂ.366.
[34] ಹಡಗಲಿ ತಾಲೂಕ, ಶಾ.ಸಂ.64, ಪು.ಸಂ.84.

ಶಾಸನಗಳಲ್ಲಿ 'ದಾನವನ್ನು ಕಾಪಾಡಿದರೆ ಅಶ್ವಮೇಧಯಾಗದ ಫಲ ಲಭಿಸುತ್ತದೆ' ಎಂದು ವ್ಯಕ್ತಪಡಿಸಲಾಗಿದೆ. ಹಾಗಾಗಿ ಶಾಪಾಶಯಗಳಲ್ಲಿ ಯಜ್ಞ-ಯಾಗಾದಿಗಳನ್ನು ಹೆಸರಿಸಿರುವುದು ಕಂಡುಬಂದಿದೆ.

ಕ್ರಿ.ಶ.1070ರ ಉಚ್ಚಂಗಿದುರ್ಗದ ಶಾಸನವೊಂದರಲ್ಲಿ 'ಸಹಸ್ರಲಿಂಗಮಂ ಪ್ರತಿಷ್ಟೆಗೆಯ್ದ ರಾಜಶೂಯ ಮಗ್ನಿಷ್ಟೆಯಂಸತತ್ರತ್ವ ಸ್ವಮೇಧಮಂ ಗೈಯ್ದ ಫಲಮ; ಎಂಬುದಾಗಿದೆ.[36] ಇಂದ್ರ ಮತ್ತು ಚಂದ್ರನ ಸ್ಥಾನವು ಶ್ರೇಷ್ಠವಾದುದಾಗಿದೆ. ಆದ್ದರಿಂದ ಇವರ ಹೆಸರಿನ ಪದವಿಯನ್ನು ಪಡೆಯುವುದು ಗೌರವಯುತವಾದುದೆಂದು ಶಾಸನಗಳಲ್ಲಿ ತಿಳಿಸಲಾಗಿದೆ. ಹಾಗೆಯೇ ನಾಣ್ಯಗಳ ಉಲ್ಲೇಖವು ಇದೆ. ಕ್ರಿ.ಶ.1226ರ ಉತ್ತಂಗಿ ಶಾಸನವು ಇಂದ್ರ ಮತ್ತು ಚಂದ್ರನ ಪದವಿಯನ್ನು ಕುರಿತು ಹೇಳಿದೆ.[37] ಕ್ರಿ.ಶ.1017ರ ಬಲ್ಲಕುಂದೆ ಶಾಸನವೊಂದರಲ್ಲಿ ಸಾವಿರ ಗದ್ಯಾಣಗಳ ಉಲ್ಲೇಖವಿದೆ.[38] ಶಾಸನಗಳನ್ನು ರಕ್ಷಿಸಿದರೆ ಸ್ವರ್ಗ ಪ್ರಾಪ್ತಿಯಾಗುವುದೂ ಅವುಗಳನ್ನು ಅಪಹರಿಸಿದರೆ ನರಕ ಬರುವುದಾಗಿ ಶಾಪಾಶಯಗಳಲ್ಲಿ ಸ್ವರ್ಗ ಮತ್ತು ನರಕಗಳ ಪರಿಕಲ್ಪನೆಗಳಿವೆ. ಕ್ರಿ.ಶ.1208ರ ಕುರವತ್ತಿ ಶಾಸನದಲ್ಲಿ ಈ ಧರ್ಮವೆ ನೊರತಿರರೌರವಕ್ಕೆ ಗಳಗಳ ನಿಳಿವತು ಎಂಬುದಾಗಿದೆ.[39] ಸೋಮಲಾಪುರ ಶಾಸನದಲ್ಲಿ ಸ್ವರ್ಗದ ಪರಿಕಲ್ಪನೆ ಇದೆ.[40] ಮಣೂರು ಶಾಸನವೊಂದರಲ್ಲಿ ದೇವಲೋಕ, ಮರ್ತ್ಯವಲೋಕಕ್ಕೆ ಹೊರಗು ಎಂದಿದೆ.[41]

ಶಾಸನಗಳಲ್ಲಿ ಪಾತಕ, ಮಹಾಪಾತಕ ಮತ್ತು ಪಂಚ ಮಹಾಪಾತಕಗಳನ್ನು ಕುರಿತು ವ್ಯಕ್ತವಾಗಿದೆ. ಕ್ರಿ.ಶ.1149ರ ಓರುವಾಯಿ ಶಾಸನದಲ್ಲಿ 'ಈ ಧರ್ಮವನಳಿದವರ್ಗ್ಗೆ ಆ ಸ್ಥಾನದಲನಿಸು ಕವಿಲೆಯು ಮನನಿಬರು ಬ್ರಾಹ್ಮಣರು ಮನಳಿದ ಪಾತಕ ಮಕ್ಕು' ಎಂದಿದೆ.[42] ಕ್ರಿ.ಶ1119ರ ಕುಡತಿನಿ ಶಾಸನದಲ್ಲಿ 'ಧರ್ಮ್ಮವನಳಿಪ್ಪಡಾತಿಥಿಯಲಾ ತೀರ್ತ್ಥಗಳ ನಿಬರು ಬ್ರಾಹ್ಮಣರು ಮನನಿತು ಕವಿಲೆಗಳು ಮನಳಿದ ಮಹಾಪಾತಕನಕ್ಕು' ಎಂಬ ಉಲ್ಲೇಖವಿದೆ.[43]

ಕ್ರಿ.ಶ.1064ರ ಉಚ್ಚಂಗಿದುರ್ಗದ ಶಾಸನವೊಂದರಲ್ಲಿ 'ಈ ಧರ್ಮವನಳಿದ ವರ್ಗ್ಗೆ ಆ ತೀರ್ಥ(ದ)ಲು ಆ ಸಾಸಿರ ಕವಿಲೆಯಮಂ ಸಾಸಿರ್ವರು (ಬ್ರಾಂ)ಹ್ಮಣರು (ಮಂ) ಸಾಸಿದ ಲಿಂಗಮು ಮಂನಳಿದ ಪಂಚಮಹಾಪಾತಕನ' ಎಂಬ ಉಲ್ಲೇಖವಿರುವುದನ್ನು ಕಾಣಬಹುದಾಗಿದೆ.[44] ಕ್ರಿ.ಶ.1513ರ ಹಂಪಿಯ ಶಾಸನದಲ್ಲಿ ಪಂಚಮಹಾಪಾತಕಗಳಾದ ಗೋಹತ್ಯೆ, ಬ್ರಹ್ಮಹತ್ಯೆ. ಸ್ತ್ರೀಹತ್ಯೆ, ಭ್ರೂಣಹತ್ಯೆ, ಅಶ್ವಹತ್ಯೆಗಳ ಉಲ್ಲೇಖಗಳಿವೆ.[45] ಶಾಪಾಶಯಗಳಲ್ಲಿ ದಾನ ಶಾಸನಗಳನ್ನು ಕಾಪಾಡಿದರೆ ಪುಣ್ಯ ಲಭಿಸುತ್ತದೆ

[35] ಬಳ್ಳಾರಿ ತಾಲೂಕು, ಶಾ.ಸಂ.64, ಪು.84; ಹಂಪಿ ಶಾಸನ, ಕಮಲಾಪುರ ಶಾ.ಸಂ.384, ಪು.ಸಂ.271.
[36] ಹಾರನಹಳ್ಳಿ ತಾಲೂಕು ಶಾ.ಸಂ.4, ಪು.ಸಂ.458.
[37] ಹಡಗಲಿ ತಾಲೂಕು ಶಾ.ಸಂ.108. ಪು.ಸಂ.449.
[38] ಸಿರಗುಪ್ಪ ತಾಲೂಕು, ಶಾ.ಸಂ.30, ಪು.ಸಂ.110.
[39] ಹಡಗಲಿ ತಾಲೂಕು, ಶಾ.ಸಂ.8, ಪು.ಸಂ310.
[40] ಬಳ್ಳಾರಿ ತಾಲೂಕು, ಶಾ.ಸಂ.71, ಪು.ಸಂ.87.
[41] ಸಿರಗುಪ್ಪ ತಾಲೂಕು, ಶಾ.ಸಂ.64, ಪು.ಸಂ.137.
[42] ಬಳ್ಳಾರಿ ತಾಲೂಕು, ಶಾ.ಸಂ.40, ಪು.ಸಂ.55.
[43] ಬಳ್ಳಾರಿ ತಾಲೂಕು, ಶಾ.ಸಂ.36. ಪು.ಸಂ.51.
[44] ಹರಪ್ಪನಹಳ್ಳಿ ತಾಲೂಕು, ಶಾ.ಸಂ.9, ಪು. ಸಂ.467; ಶಾ.ಸಂ.4, ಪು.ಸಂ.458.
[45] ಹಂಪಿ ಶಾಸನ, ಶಾ.ಸಂ.208, ಪು.164; ಶಾ.ಸಂ.211, ಪು.ಸಂ.169.

ಹಾಳು ಮಾಡಿದರೆ ಪಾಪ ಬರುತ್ತದೆ ಎಂದು ಹೇಳುವಾಗ ರೋಗಗಳನ್ನು ಕುರಿತು ಹೇಳಿದ್ದಾರೆ. ಕ್ರಿ.ಶ.1131ರ ಬೈಲೂರು ಶಾಸನದಲ್ಲಿ 'ಈದನಾವನೊರ್ಬ್ಬನಿಲ್ಲೆಂದನ ಬಾಯಲು ಕೋಷ್ಟಂ ಮೂಡಗೊ' ಎಂದಿದೆ.[46]

ಬಳ್ಳಾರಿ ಜಿಲ್ಲೆಯ ಅನೇಕ ಶಾಸನಗಳಲ್ಲಿ ಸಂಖ್ಯಾಸೂಚಕ ಶಾಪಾಶಯಗಳಿರುವುದನ್ನು ಕೂಡ ಕಾಣಬಹುದಾಗಿದೆ. ಕ್ರಿ.ಶ.1140ರ ಕುಡುತಿನಿ ಶಾಸನದಲ್ಲಿ ಕೋಟಿ, ಸಹಸ್ರಗಳ ಉಲ್ಲೇಖವಿರುವುದನ್ನು ಸೂಚಿಸುತ್ತದೆ.[47] ಕ್ರಿ.ಶ.1104ರ ಕುರುವತ್ತಿ ಶಾಸನದಲ್ಲಿ ಸಾಸಿರ ಬ್ರಾಹ್ಮಣರು ಸಾಸಿರ ಗೋವುಗಳ ಉಲ್ಲೇಖವಿದೆ.[48] ಕ್ರಿ.ಶ.1220ರ ಅಣಜಿಗೆರೆ ಶಾಸನದಲ್ಲಿ 'ಯೇಳ್ನೂರು ಕವಿಲೆಯನ್ನು ಕೊಂದ ದೋಷಮಕ್ಕು' ಎಂದಿದೆ.[49] ಗೋವು ಒಂದು ಪವಿತ್ರವಾದ ಪ್ರಾಣಿ. ಅದನ್ನು ದಾನ ನೀಡುವಾಗ ಚಿನ್ನ ಬೆಳ್ಳಿಯಲ್ಲಿ ಅಲಂಕರಿಸಿ ದಾನ ನೀಡಿದರೆ ಪುಣ್ಯ ಬರುತ್ತದೆ ಎಂಬುದಾಗಿ ಶಾಪಾಶಯದಲ್ಲಿದೆ.

ಕ್ರಿ.ಶ.1120ರ ಕುರುಗೋಡು ಶಾಸನದಲ್ಲಿ 'ಸವತ್ಸ ಕವಿಲೆಗಳಂ ರೌಪ್ಯ ಸುವರ್ಣ ಶೃಂಗಾಳಂಕೃತ ದಾನರಿಗೆಯ್ದ ಫಲವುಕ್ಕುವೀ...' ಕುರುವಿನ ಸಮೇತವಿರುವ ಹಸುಗಳ ಕೊಂಬುಗಳನ್ನು ಶೃಂಗರಿಸಿ ಚಿನ್ನದ ಹಗ್ಗದ ಸಮೇತವಾಗಿ ದಾನ ನೀಡಿದ ಫಲವನ್ನು ಪಡೆಯುವುದು ಎಂದಿದೆ.[50] ಕ್ರಿ.ಶ.1111ರ ಕುರುವತ್ತಿ ಶಾಸನವೊಂದರಲ್ಲಿ ಸಾವಿರ ಗೋವುಗಳ ಕೊಂಬಿಗೆ ಹಾಕುವ ಕೊಳಗವನ್ನು ಚಿನ್ನದಲ್ಲಿ ಮಾಡಿಸಿ ವೇದಗಳಲ್ಲಿ ಪಾರಂಗತರಾದ ಬ್ರಾಹ್ಮಣರಿಗೆ ದಾನ ಮಾಡಿದರೆ ಪುಣ್ಯ ಬರುವುದಾಗಿ ಹೇಳಿದೆ.[51]

ಕ್ರಿ.ಶ.1046 ಮೈಲಾರ ಶಾಸನದಲ್ಲಿ ಸಾವಿರ ಗೋವುಗಳ ಕೋಡಿಗೆ ಹಾಕುವ ಕೊಳಗವನ್ನು ಪಂಚರತ್ನಗಳಿಂದ ಮಾಡಿಸಿ ಬ್ರಾಹ್ಮಣರಿಗೆ ದಾನ ಮಾಡಿದರೆ ಫಲ ಲಭಿಸುತ್ತದೆ.[52]

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಬಳ್ಳಾರಿ ಜಿಲ್ಲೆಯ ಶಾಪಾಶಯಗಳನ್ನು ನೋಡಿದಾಗ ಎಲ್ಲಾ ಶಾಸನಗಳಲ್ಲಿ ಒಂದೇ ರೀತಿಯ ಶಾಪಾಶಯಗಳು ಕಂಡುಬಂದಿವೆ. ಅದರಲ್ಲಿ ಕೆಲವು ವಿಶೇಷ ಶಾಪಾಶಯಗಳು ಇರುವುದನ್ನು ಗುರುತಿಸಲಾಗಿದೆ. ಪ್ರಾಚೀನ ಕಾಲದಲ್ಲಿ ಧಾರ್ಮಿಕ ನೆಲೆಗಟ್ಟಿನಲ್ಲಿ ಜನರನ್ನು ನಿಯಂತ್ರಿಸಲಾಗುತ್ತಿತ್ತು. ಕ್ರಮೇಣ ಶಾಸನಗಳಲ್ಲಿ ಶಾಪಾಶಯಗಳನ್ನು ಹಾಕಿಸುವುದರ ಮೂಲಕ ನಿಯಂತ್ರಿಸುವ ಪ್ರಯತ್ನ ಮಾಡುತ್ತಿದ್ದರು. ದಾನ ಶಾಸನದ ಅಪಹರಣ ಕ್ರಮೇಣ ಹೆಚ್ಚಾಗುತ್ತಲೇ ಹೋದುದರಿಂದ ಅಪಹರಣಕಾರರನ್ನು ನಿಯಂತ್ರಣ ಮಾಡುವದಕ್ಕೆ ಅಶ್ಲೀಲಕರವಾದ ಬೈಗುಳದಂತಹ ಮಾತುಗಳನ್ನು ಬಳಸಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಅಪಹರಣಕಾರರು ಮಾನಸಿಕ ಹಿಂಸೆಯನ್ನು ಅನುಭವಿಸುವಂತೆ ಮಾಡಲು ಅನೈತಿಕ ಸಂಬಂಧವನ್ನು ಸೇರಿಸಿರುವುದನ್ನು ಕೂಡ ಇಲ್ಲಿ ಗಮನಿಸಬಹುದಾಗಿದೆ.

---

[46] ಬಳ್ಳಾರಿ ತಾಲೂಕು, ಶಾ.ಸಂ.59, ಪು.ಸಂ.75; ಹಡಗಲಿ ತಾಲೂಕು, ಕುರುವತ್ತಿ ಶಾ.ಸಂ.4, ಪು.ಸಂ.313.
[47] ಬಳ್ಳಾರಿ ತಾಲೂಕು, ಶಾ.ಸಂ.31, ಪು.ಸಂ.43.
[48] ಹಡಗಲಿ ತಾಲೂಕು ಶಾ.ಸಂ.13, ಪು.ಸಂ.320.
[49] ಶಾ.ಸಂ.25, ಪು.479.
[50] ಬಳ್ಳಾರಿ ಜಿಲ್ಲೆ ಶಾ.ಸಂ.33, ಪು.ಸಂ.47.
[51] ಬಳ್ಳಾರಿ ತಾಲೂಕು, ಶಾ.ಸಂ.13, ಪು.ಸಂ.320.
[52] ಹಡಗಲಿ ತಾಲೂಕು, ಶಾ.ಸಂ.23, ಪು.ಸಂ.327.

**ಕೃತಜ್ಞತೆಗಳು**

ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ನೀಡಿದ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಸಿ.ಮಹದೇವರವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

**ಪರಾಮರ್ಶನ ಗ್ರಂಥಗಳು.**

- ಚಿದಾನಂದ ಮೂರ್ತಿ.ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಐದನೇ ಮುದ್ರಣ, ಸಪ್ನಬುಕ್ ಹೌಸ್, ಬೆಂಗಳೂರು.
- ಮಂಜುನಾಥ ಸಿ.ಯು. (2012). ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ. ಚಿತ್ಕಲಾ ಪ್ರಕಾಶನ, ಕುಪ್ಪಂ.
- ದೇವರ ಕೊಂಡಾರೆಡ್ಡಿ. (ಸಂ). (1998). ಬಳ್ಳಾರಿ ಜಿಲ್ಲೆ: ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 1. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ದೇವರ ಕೊಂಡಾರೆಡ್ಡಿ. (ಸಂ). (2000). ಹಂಪಿ ಶಾಸನಗಳು: ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 3. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ದೇವರ ಕೊಂಡಾರೆಡ್ಡಿ. (2008). ಕರ್ನಾಟಕ ಶಾಸನಗಳಲ್ಲಿ ಶಾಪಾಶಯ. ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಾಡ
- ನರೇಗಲ್ಲ ಎಂ.ಎಸ್. (2009). ಉತ್ತರ ಗದಗ ಜಿಲ್ಲೆಯ ಶಾಸನಗಳು: ಒಂದು ಅಧ್ಯಯನ, ರವಿರಶ್ಮಿ ಪ್ರಕಾಶನ, ಗದಗ.

IIMRD JOURNALS